

ಅರುಣ ಪಿ. ಭಟ್ಟ

## ವಾರಭವಿಷ್ಯ 24.02.2022ರಿಂದ 02.03.2022ರವರೆಗೆ




ಹೊಸ ಕೆಲಸಗಳಿಗೆ ಪ್ರಯತ್ನಿಸಲು ಸೂಕ್ತ ಕಾಲ. ಭದ್ರತೆ ಮತ್ತು ತಂತ್ರಜ್ಞಾನದಂಥ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಗ್ರಹಗತಿಗಳು ಅನುಕೂಲಕರವಾಗಿವೆ. ಹೊಸ ಕೆಲಸಗಳಿಗೆ ಸಕಾರಾತ್ಮಕ ಫಲಿತಾಂಶ. ಮಕ್ಕಳ ಪರಿಸರವನ್ನು ನೀವು ಉತ್ತಮವಾಗಿಟ್ಟುಕೊಳ್ಳುವ ಮನಸ್ಥಿತಿಯನ್ನು ರೂಪಿಸುವುದು ಒಳ್ಳೆಯದು. ಶುಭದಿನ 28. ಗೋಪೂಜೆ ಮಾಡಿರಿ. ಉಮಾಮಹೇಶ್ವರ ಪ್ರಾರ್ಥನೆ ಮಾಡಿರಿ.

ನೀವು ಮಾಡುವ ಕೆಲಸದಲ್ಲಿ ಉತ್ತಮ ಫಲಿತಾಂಶ ವೃದ್ಧಿಯಾಗಲಿದೆ. ಇನ್ನೊಬ್ಬರಿಗೆ ಬುದ್ಧಿ ಹೇಳುವ ಮೊದಲು ವ್ಯಕ್ತಿ ಕೇಳುಗನಾಗಿದ್ದಾನೆಯೇ ಎಂಬುದನ್ನು ಅರಿತುಕೊಳ್ಳಿ. ಆದಾಯ ಹೆಚ್ಚಳಕ್ಕೆ ಅವಕಾಶ ಇದೆ. ವಾರದ ಆರಂಭದಲ್ಲಿ ಮನೆಯಲ್ಲಿ ಹಾಗೂ ಕುಟುಂಬದಲ್ಲಿ ಸಂತೋಷವಾಗಿ ಇರುವುದರಿಂದ ನಿಮ್ಮ ಮನಸು ಕೂಡ ಸಮಾಧಾನವಾಗಿ ಇರುತ್ತದೆ. ಶುಭದಿನ 26. ಹನುಮಾನ್ ಚಾಲಿಸ್ ಪಠಿಸಿರಿ.







ಈ ವಾರದ ಮೊದಲಾರ್ಧದಲ್ಲಿ ಗ್ರಹಗತಿಗಳು ನಿಮಗೆ ಅನುಕೂಲಕರವಾಗಿವೆ. ಈ ಅವಧಿಯಲ್ಲಿ ಮುಖ್ಯವಾದ ಕೆಲಸಗಳನ್ನು ಮಾಡಿಕೊಳ್ಳಿ. ನಿಮ್ಮ ವಿನಯದಿಂದ ಹೆಚ್ಚಿನ ಹೆಸರು ಸಂಪಾದನೆ ಮಾಡಲಿದ್ದೀರಿ. ಸಂಗಾತಿಯ ಬಯಕೆಗಳಿಗೆ ನೀವು ಸಮ್ಮತಿಯ ವಾಗ್ದಾನ ನೀಡಲಿದ್ದೀರಿ. ಮಕ್ಕಳ ಕೆಲವು ವರ್ತನೆಗಳು ನಿಮ್ಮ ಮನದಲ್ಲಿ ಬೇಸರ ತರಿಸಲಿದೆ. ಶುಭದಿನ 27. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.

ಮಾಡುವ ಕಾರ್ಯದಲ್ಲಿ ಅನಗತ್ಯವಾಗಿ ತೊಂದರೆ ಬರಬಹುದಾಗಿದೆ. ಆದಷ್ಟು ಸಮಸ್ಯೆ ಪರಿಹಾರ ಹುಡುಕಿ. ಕೆಲವು ಕಾರ್ಯಗಳನ್ನು ನೀವೇ ನಿಂತು ಮಾಡುವುದು ಒಳಿತು. ಕಾನೂನು ವ್ಯಾಜ್ಯಗಳು, ವಾದ–ಕುಟುಂಬದಲ್ಲಿ ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನ ಮಾಡುತ್ತೀರಿ. ವಿದೇಶಿ ವ್ಯವಹಾರದಲ್ಲಿ ನೀವು ಅಂದುಕೊಂಡ ಫಲಿತಾಂಶ ದೊರೆಯಲಿದೆ. ಶುಭದಿನ 1. ವೆಂಕಟೇಶ್ವರ ಸ್ತೋತ್ರ ಪಠಿಸಿರಿ.







ವಿವೇಚನಾರಹಿತ ಹೂಡಿಕೆಗಳಿಂದ ಧನ ನಷ್ಟ ಆಗುವ ಸಂಭವ. ನಿಮ್ಮದೇ ವಿಚಾರಗಳು ನಡೆಯಬೇಕೆಂಬ ವಾದ ಅತಿಶಯೋಕ್ತಿಯಾಗಿ ಕಾಣಬಹುದು. ಎಲ್ಲರ ಮಾತಿಗೆ ಪ್ರಾಧಾನ್ಯತೆ ನೀಡಿ ಮುನ್ನಡೆಯಿರಿ. ನಿಮ್ಮಲ್ಲಿ ಹೊಳೆಯುವ ಆಲೋಚನೆ ಉತ್ತಮ ಪರಿಕಲ್ಪನೆಯಾಗಿದ್ದು ಇದರಿಂದ ಅನುಕೂಲಗಳು ಕಾಣಸಿಗಲಿದೆ. ಉತ್ಸಾಹ ಮಾಮೂಲಿಗಿಂತ ಹೆಚ್ಚಾಗಿ ಇರುತ್ತದೆ. ಶುಭದಿನ 25. ವಿಷ್ಣು ಸಹಸ್ರನಾಮ ಓದಿರಿ.

ಕೆಲಸದಲ್ಲಿ ಹೆಚ್ಚಿನ ವಿಳಂಬದಿಂದ ನಿಮ್ಮ ಬಗ್ಗೆ ಹಲವರು ಹಲವಾರು ಮಾತುಗಳನ್ನಾಡುವರು. ಕೆಲ ವಿಚಾರಗಳಲ್ಲಿ ಅತಿಯಾದ ಆಸಕ್ತಿ ತೋರಿಸುವುದು ಒಳ್ಳೆಯದಲ್ಲ. ಯೋಜನೆಗಳ ವಿಸ್ತರಣೆಗೆ ಅವಕಾಶಗಳು ಸಿಗುವ ಸಾಧ್ಯತೆ ಕಂಡುಬರುತ್ತದೆ. ವ್ಯಾಪಾರ ವ್ಯವಹಾರ ವಿಸ್ತರಣೆಗೆ ಆಲೋಚನೆ ಮಾಡುತ್ತೀರಿ. ವಿದೇಶ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅನುಕೂಲ ಆಗಲಿದೆ. ಶುಭದಿನ 01. ನವದುರ್ಗಾ ಆರಾಧನೆ ಮಾಡಿರಿ.







ಹಿರಿಯರ ಬಗ್ಗೆ ಗೌರವ ನೀಡುವುದು ಒಳ್ಳೆಯದು. ಉತ್ತಮ ಆರ್ಥಿಕ ಗಳಿಕೆ ಇದ್ದರು ಸಹ ಕೆಲವೊಂದು ವಿಷಯಗಳಲ್ಲಿ ನಿಮ್ಮ ದುಡುಕುತನ ದೊಡ್ಡಪೆಟ್ಟನ್ನು ನೀಡಬಹುದು. ಮನಸ್ಸು ಮರ್ಕಟ ವಿದ್ದಂತೆ ನಿಮ್ಮ ಮನೋಕಾಮನೆಗಳನ್ನು ಆದಷ್ಟು ನಿಯಂತ್ರಣ ಮಾಡುವುದು ಒಳ್ಳೆಯದು. ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆಗಳು ಕಂಡುಬರುತ್ತದೆ. ಶುಭದಿನ 28. ಆದಿತ್ಯ ಹೃದಯ ಪಠಿಸಿರಿ.

ಆರ್ಥಿಕವಾಗಿ ಬೆಳವಣಿಗೆ ಸಾಧಿಸುವಿರಿ. ರಾಜಿ ಪಂಚಾಯಿತಿಗೆ ಹೋಗದಿರುವುದು ಸೂಕ್ತ. ಸಂಗಾತಿಯ ಜೊತೆಗೆ ಖರೀದಿ ಪ್ರಕ್ರಿಯೆಗಳನ್ನು ಮಾಡಲು ಇಚ್ಛಿಸುತ್ತೀರಿ. ನಿಮ್ಮ ಸಾಮರ್ಥ್ಯ ಕಂಡು ಇತರರು ಬೆರಗಾಗುತ್ತಾರೆ. ಹೊಸ ಕೆಲಸಕ್ಕೆ ಪ್ರಯತ್ನಿಸುವವರು ಶ್ರಮವನ್ನು ಹೆಚ್ಚಿಸಬೇಕು. ಸಮಾಜದಲ್ಲಿ ಅತಿ ಮುಖ್ಯವಾದ ಹುದ್ದೆಗೆ ನಿಮ್ಮ ಹೆಸರನ್ನು ಸೂಚಿಸುವ ಸಾಧ್ಯತೆ ಇದೆ. ಶುಭದಿನ 1. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.







ಗ್ರಹಗತಿಗಳು ನಿಮ್ಮ ಕಡೆಗೆ ಶುಭ ದೃಷ್ಟಿ ಬೀರುತ್ತಿವೆ. ಬಾಕಿ ಇರುವ ನಿಮ್ಮ ಹಲವು ಕೆಲಸಗಳಿಗೆ ಈ ವಾರ ಪರಿಹಾರ ಸಿಗಲಿದೆ. ಉದ್ಯೋಗ ಹಾಗೂ ವೈಯಕ್ತಿಕ ಸಂಗತಿಗಳಲ್ಲಿ ನಿಮ್ಮ ಪಾಲಿಗೆ ಯಶಸ್ಸು ದೊರೆಯಲಿದೆ. ತುಂಬ ಮುಖ್ಯವಾದ ಚರ್ಚೆ ಕೂಡ ನಡೆಸುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ಹೆಚ್ಚು ಸಮಾಧಾನ ಹಾಗೂ ಸಂತೋಷದಿಂದ ಕಾಣಿಸಿಕೊಳ್ಳುತ್ತೀರಿ. ಶುಭದಿನ 26. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.

ಹೊಸ ಯೋಜನೆಗೆ ಈಗಿನಿಂದಲೇ ಸಿದ್ಧತೆ ನಡೆಸುವುದು ಒಳ್ಳೆಯದು. ಪಶುಸಂಗೋಪನೆ, ಕೃಷಿ ಚಟುವಟಿಕೆಗಳಲ್ಲಿ ಉತ್ತಮವಾದ ಬೆಳವಣಿಗೆ ಕಂಡುಬರುತ್ತದೆ. ಆರ್ಥಿಕ ಸಹಕಾರಕ್ಕಾಗಿ ಆತ್ಮೀಯರ ಬಳಿ ಕೇಳುವ ಸಾಧ್ಯತೆ ಇದೆ. ಭೂಮಿಯ ವಿಷಯದಲ್ಲಿ ಉತ್ತಮ ವ್ಯವಹಾರ ನಡೆಸುವ ಸಾಧ್ಯತೆ ಕಂಡುಬರುತ್ತದೆ. ವಾರದ ಶುರುವಿನಲ್ಲಿ ದೂರದ ಪ್ರಯಾಣ ಮಾಡುವ ಸಾಧ್ಯತೆ ಇದೆ. ಶುಭದಿನ 28. ಕಾಲಭೈರವನ ಸೇವೆ ಮಾಡಿರಿ.







ಸೋಲಿನಿಂದ ಗೆಲುವಿನ ಕಡೆಗೆ ಪ್ರಯಾಣ ಬೆಳೆಸುವಿರಿ. ಸಂತೋಷದ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ಕುಟುಂಬದಲ್ಲಿ ಅನಿರೀಕ್ಷಿತ ಸಂಕಷ್ಟ ಎದುರಾಗಬಹುದು. ದೃಢಮನಸ್ಸಿನಿಂದ ಕಾರ್ಯಗಳಲ್ಲಿ ಸಫಲರಾಗುವಿರಿ. ಸಮಸ್ಯೆಗಳ ಸುಳಿವಿನಿಂದ ಹೊರಬರಲು ಪ್ರಯತ್ನ ಮೆಚ್ಚುವಂತದ್ದು. ನಿಮ್ಮ ಸಾಮರ್ಥ್ಯದಿಂದ  ಸಕಾರಾತ್ಮಕವಾದ ಪ್ರಗತಿ ಕಾಣಿಸಿಕೊಳ್ಳುತ್ತದೆ. ಶುಭದಿನ 27. ಶನಿಸ್ತೋತ್ರ ಪಠಿಸಿರಿ.

ಕೌಟುಂಬಿಕ ಸಮಸ್ಯೆಗಳು ಸರಿಹೋಗಲಿದೆ. ಉದ್ಯೋಗದ ಸ್ಥಿತಿಗತಿಗಳು ಚೇತರಿಕೆಯತ್ತ ಸಾಗುತ್ತದೆ. ನಿಮ್ಮ ಕ್ರಿಯಾಶೀಲತೆಯಿಂದ ಹೊಸತಾದ ಕಲ್ಪನೆಗಳೊಂದಿಗೆ ಸಾಗುವಿರಿ. ಉದ್ಯೋಗದಲ್ಲಿ ಪ್ರಗತಿ ಸಾಧ್ಯತೆ ಇದೆ. ನಿಮ್ಮ ವಿರೋಧಿಗಳನ್ನು ಈ ಅವಧಿಯಲ್ಲಿ ಮಣಿಸುತ್ತೀರಿ. ಹಣಕಾಸು ಹೂಡಿಕೆ ಲಾಭದಾಯಕವಾಗಿ ಇರುತ್ತದೆ. ನಿಮ್ಮ ಶ್ರಮವನ್ನು ಗುರುತಿಸಲಾಗುತ್ತದೆ. ಶುಭದಿನ 1. ಗಣಪತಿಗೆ ದೂರ್ವಾರ್ಚನೆ ಮಾಡಿರಿ.

